**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 5791/2025**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 1**

**ದಿನಾಂಕಃ** 04.06.2026 **ಸಿಡಬ್ಲ್ಯೂ 1**

| | |
|---|---|
| ಹೆಸರು | ಶ್ರೀಮತಿ ರೇಖಾ ಎಸ್ ಹೆಚ್ |
| ತಂದೆ ಹೆಸರು | ಹನುಮಂತಪ್ಪ |
| ವಯಸ್ಸು | 33 ವರ್ಷ |
| ಉದ್ಯೋಗ | ಅಬಕಾರಿ ಉಪ ನಿರೀಕ್ಷಕರು |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಜನವರಿ 9 2023 ರಿಂದ ಇಲ್ಲಿಯವರೆಗೆ ಅಬಕಾರಿ ಉಪ ನಿರೀಕ್ಷಕರ ಕಚೇರಿಲ್ಲಿ ಅಬಕಾರಿ ಉಪ ನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ31.05.2025 ರಂದು ನಾನು ಹಾಗೂ ಸಿಬ್ಬಂದಿಗಳಾದ ಚಾಸಾ.2 ಮತ್ತು 3 ರವರೊಂದಿಗೆ ಹರಿಹರ ನಗರದ ಜೈಭೀಮ ನಗರದಲ್ಲಿ ಗಸ್ತು ಮಾಡುತ್ತಿರುವಾಗ ನೀಲಪ್ಪ ಅರಳೀಕಟ್ಟೆ ಎನ್ನುವವನು ತನ್ನ ಮನೆಗೆ ಹೊಂದಿಕೊಂಡು ಇರುವ ಕಿರಾಣಿ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತ ಮಾಹಿತಿ ಬಂದಿದ್ದು ಪಂಚನಾಮೆಯನ್ನು ಜರುಗಿಸಲು ಪಂಚರನ್ನು ಹುಡುಕಲಾಗಿ ಅಲ್ಲಿಯೇ ಸ್ಥಳದಲ್ಲಿ ಸ್ಥಳೀಯರನ್ನು ಕರೆದು, ಬಾತ್ಮಿಯನ್ನು ತಿಳಿಸಿ ದಾಳಿಯ ಸಮಯದಲ್ಲಿ ಜೊತೆ ಇದ್ದು ಪಂಚನಾಮೆಯನ್ನು ಜರುಗಿಸಲು ಕೇಳಿಕೊಂಡಿದ್ದರಿಂದ ಸ್ಥಳೀಯರು ಒಪ್ಪಿರುವುದಿಲ್ಲ ಹಾಗಾಗಿ ಇಲಾಖೆ ಸಿಬ್ಬಂದಿಗಳನ್ನು ಪಂಚರನ್ನಾಗಿ ಮಾಡಿಕೊಂಡು ಮಾಹಿತಿ ಇದ್ದ ಸ್ಥಳಕ್ಕೆ ಹೋದಾಗ ಕಿರಾಣಿ ಅಂಗಡಿಯ ಮುಂಭಾಗದಲ್ಲಿ ವ್ಯಕ್ತಿಯೊಬ್ಬ ನಿಂತಿದ್ದು ಆತನನ್ನು ಕರೆದು ಹೆಸರು ವಿಳಾಸ ಕೇಳಲಾಗಿ ಆ ವ್ಯಕ್ತಿಯು ನೀಲಪ್ಪ ಅರಳೀಕಟ್ಟೆ ತಂದೆ ಗುಡ್ಡಪ್ಪ ಎಂದು ತಿಳಿಸಿದ್ದು, ಬಂದ ಬಾತ್ಮಿಯನ್ನು ಅವನಿಗೆ ಹೇಳಿ ಸದರಿ ಅಂಗಡಿಯನ್ನು ಶೋಧಿಸಲು ಮಾನ್ಯ ನ್ಯಾಯಾಲಯದಿಂದ ಶೋದನಾ ವಾರಂಟನ್ನು ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದ ಕಾರಣ ಶೊಧನಾ ಸಮುಚಿತ ಆದಾರವನ್ನು ಸ್ಥಳದಲ್ಲಿ ತಯಾರಿಸಿಕೊಂಡು ಪಂಚರು ಹಾಗೂ ಆರೋಪಿಗಳ ಸಹಿ ಪಡೆದುಕೊಂಡು ಕಿರಾಣಿ ಅಂಗಡಿಯನ್ನು ಶೋಧಿಸಲಾಗಿ ಆ ಅಂಗಡಿಯ ಪ್ರವೇಶ ದ್ವಾರವು ದಕ್ಷಿಣಾಭಿಮುಖವಾಗಿದ್ದು ಪ್ರವೇಶ ದ್ವಾರದ ಪಕ್ಕದ ಗಲ್ಲಾಪೆಟ್ಟಿಗೆಯ ಟೇಬಲ್ ನ ಕೆಳಗೆ ಸ್ಟಾರ್ ಪಾನ್ ಮಸಾಲಾ ಚೀಲದಲ್ಲಿ 90 ಮಿಲಿಯ ಒರಿಜನಲ್ ಚಾಯ್ಸ್ ವಿಸ್ಕಿಯ 25 ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್ಗಳು ಹಾಗೂ 90 ಮಿಲಿಯ ಹೈವಾಟ್ಸ್ ವಿಸ್ಕಿಯ 25 ಮದ್ಯ ತುಂಬಿದ ಟೆಟ್ರಾ ಪ್ಯಾಕೆಟ್ ಗಳು ಇದ್ದು ಒಟ್ಟು 50 ಟೆಟ್ರಾ ಪ್ಯಾಕೆಟಗಳು ಇದ್ದು ಒಟ್ಟು 4.500 ಲೀ ಮದ್ಯ ಇದ್ದು

ಅವುಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಅವುಗಳ ಮೇಲೆ ಯಾವುದೇ ಭದ್ರತಾ ಸಂಖ್ಯೆ ಇರುವುದು ಕಂಡು ಬಂದಿರುವುದಿಲ್ಲ. ಆರೋಪಿತನಿಗೆ ಮದ್ಯ ಮಾರಾಟ ಮಾಡಲು ಪರವಾನಿಗೆ ಇದೆಯ ಎಂದು ಕೇಳಲಾಗಿ ಆತನು ಯಾವುದೇ ಪರವಾನಗಿ ಇಲ್ಲ ಎಂದು ತಿಳಿಸಿರುತ್ತಾನೆ. ಸದರಿ ಮುದ್ದೆ ಮಾಲುಗಳಿಂದ ರಾಸಾಯನಿಕ ಪರೀಕ್ಷೆಗಾಗಿ 90 ಮಿಲಿಯ ಒರಿಜಿನಲ್ ಚಾಯ್ಸ್ ವಿಸ್ಕಿಯಿಂದ 9 ಟೆಟ್ರಾ ಪ್ಯಾಕೆಟಗಳು ಹೈವಾಟ್ಸ ವಿಸ್ಕಿಯಿಂದ 17 ಟೆಟ್ರಾ ಪ್ಯಾಕೆಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಚೀಲದಲ್ಲಿ ಕಟ್ಟಿ ಇಲಾಖಾ ಸೀಲಿನಿಂದ ಸೀಲ್ ಮಾಡಿ ಮಾದರಿ ಸೀಲಿನ ನಮೂನೆ ಅಂಟಿಸಿರುತ್ತೇವೆ. ನಂತರ ಆರೋಪಿತನಿಗೆ ನೋಟೀಸ ನೀಡಿ ಮುದ್ದೆ ಮಾಲುಗಳೊಂದಿಗೆ ಕಚೇರಿಗೆ ಬಂದು ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ. ಪಂಚನಾಮೆ ಕಾಲಕ್ಕೆ ಮೊಬೈಲ್ ವೀವೊ ವಿ27 ನಲ್ಲಿ ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ. ನಂತರ ಪ್ರ.ವ.ವರದಿಯನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಶೋಧನಾ ಸಮುಚಿತ ಆಧಾರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1, ಸಾಕ್ಷಿಯ ಸಹಿ ನಿಪಿ.1 ಎ ಎಂದು, ಪಂಚನಾಮೆಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು, ಮುಟ್ಟುಗೋಲುಯಾದಿ ನಿಪಿ.3, ಸಾಕ್ಷಿಯ ಸಹಿ ನನಿಪಿ.3 ಎ, ಮಾದರಿ ಸೀಲು ನಮೂನೆ ನಿಪಿ.4, ಸಾಕ್ಷಿಯ ಸಹಿ ನಿಪಿ.4 ಎ, ಪಂಚನಾಮೆ ಕಾಲಕ್ಕೆ ತೆಗೆದ ಪೋಟೋ ನಿಪಿ.5, ಸಿಡಿ ನಿಪಿ.6, ದೂರು ನಿಪಿ.7, ಸಾಕ್ಷಿಯ ಸಹಿ ನಿಪಿ.7 ಎ, ಪ್ರ.ವ.ವರದಿಯನ್ನು ನಿಪಿ.8, ಸಾಕ್ಷಿಯ ಸಹಿ ನಿಪಿ.8 ಎ ಎಂದು ಗುರುತಿಸಲಾಯಿತು. ಮುದ್ದೆ ಮಾಲುಗಳನ್ನು 1 ರಿಂದ 27 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಹಾಗೂ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಎನ್ ಟಿ ವಕೀಲರಿಂದಃ**

ದೂರನ್ನು ನಾನು ಸ್ವತಃ ದಾಖಲಿಸಿಕೊಂಡಿರುತ್ತೇನೆ. ಜೈ ಭೀಮ್ ನಗರ ಗ್ರಾಮ ಅಲ್ಲ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಮಾಹಿತಿ ಯಾವ ರೀತಿ ಬಂದಿರುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಗುನ್ನೆ ಸ್ಥಳದಲ್ಲಿ ಸ್ಥಳೀಯರನ್ನು ಪಂಚನಾಮೆಗೆ ಸಹಕರಿಸುವಂತೆ ಕೇಳಿರುತ್ತೇನೆ ಆದರೆ ಹೆಸರು ನೆನಪಿರುವುದಿಲ್ಲ. ನಾನು ಸ್ಥಳೀಯರನ್ನು ಕರೆದ ಬಗ್ಗೆ ಯಾವುದೇ ದಾಖಲಾತಿಯನ್ನು ತಯಾರಿಸಿರುವುದಿಲ್ಲ. ಗುನ್ನಾ ಸ್ಥಳದಲ್ಲಿ ಸಾಕಷ್ಟು ಜನರ ಓಡಾಟ ಇರುತ್ತದೆ ಎಂದರೆ ಸರಿ. 50 ಮದ್ಯದ ಟೆಟ್ರಾ ಪ್ಯಾಕೆಟಗಳು ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿ. ಚಾಸಾ.2 ಮತ್ತು 3 ನಮ್ಮ ಸಿಬ್ಬಂದಿ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಕತ್ತಲು ಇತ್ತು ಎಂದರೆ ಸರಿ. ಅಬಕಾರಿ ಇಲಾಖೆಯಿಂದ ನಮಗೆ ಮೊಬೈಲ್ ಕ್ಯಾಮೆರಾಗಳನ್ನು ಕೊಟ್ಟಿರುವುದಿಲ್ಲ. ನಾನು ಪಂಚನಾಮೆಯಲ್ಲಿ ಯಾವ ದೀಪದ ಕಂಬದ ಸಹಾಯದಿಂದ ಪಂಚನಾಮೆ ಬರೆದಿರುತ್ತೇನೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಾನು ಆರೋಪಿತರಿಂದ ಯಾವುದೇ ಮುದ್ದೆ ಮಾಲುಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಮಾಡದೇ ಇದ್ದರೂ ಸಹ ನಾನು ನಮ್ಮ ಕಚೇರಿಯ ಅಂಕೆ ಸಂಖ್ಯೆ

ಗೋಸ್ಕರ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ